ಈ) ಈ ಯೋಜನೆಗೆ ಯಾವುದೇ ಹಣ ಬಿಡುಗಡೆಯಾಗುವುದಿಲ್ಲ ಮತ್ತು ಖರ್ಚಾಗುವುದಿಲ್ಲ ಎಂಬ ಸಂಗತಿ ನಿಜವೆ?

ಉ) ಹಾಗಿದ್ದಲ್ಲಿ ಹಣ ಖರ್ಚು ಮಾಡದೇ ಇರುವ ಅಧಿಕಾರಿಗಳ ಬಗ್ಗೆ ಸರ್ಕಾರ ಯಾವ ಕ್ರಮಕೈಗೊಳ್ಳುವುದು?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು):

ಅ) 'ಅರಿವು' ಯೋಜನೆಗಾಗಿ ಆಯವ್ಯಯದಲ್ಲಿ ಕಳೆದ ವರ್ಷ ಹಾಗೂ ಈ ವರ್ಷದಲ್ಲಿ ಪ್ರತ್ಯೇಕವಾಗಿ ಹಣ ನಿಗದಿಪಡಿಸಿರುವುದಿಲ್ಲ. ನಿಗಮಗಳ ಮಾರ್ಜಿನ್ ಹಣ ಸಾಲ ಯೋಜನೆಯಡಿಯಲ್ಲಿ ಈ ಯೋಜನೆಯನ್ನು 1999-2000ನೇ ಸಾಲಿನಿಂದ ಅಳವಡಿಸಲಾಗಿತ್ತು. ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ 1999-2000ನೇ ಸಾಲಿನಲ್ಲಿ ರೂ. 3.30 ಲಕ್ಷಗಳನ್ನು ಹಾಗೂ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ರೂ. 4.70 ಲಕ್ಷಗಳನ್ನು ಖರ್ಚು ಮಾಡಲಾಗಿದೆ. 2000-01ನೇ ಸಾಲಿಗೆ ಸದರಿ ನಿಗಮಗಳ ಎಲ್ಲಾ ಜಿಲ್ಲೆಗಳಿಂದ ಅರ್ಜಿಗಳನ್ನು ಆಹ್ವಾನಿಸಿದ್ದು, ಹಿಂದುಳಿದ ವರ್ಗದ 675 ಅಭ್ಯರ್ಥಿಗಳಿಗೆ ಸಾಲವಾಗಿ ರೂ. 67.50 ಲಕ್ಷಗಳನ್ನು ಹಾಗೂ ಅಲ್ಪಸಂಖ್ಯಾತರ ವರ್ಗದ 54 ಅಭ್ಯರ್ಥಿಗಳಿಗೆ ಸಾಲವಾಗಿ ರೂ. 5.40 ಲಕ್ಷಗಳನ್ನು ನೀಡುವ ಗುರಿಯನ್ನು ಹಮ್ಮಿಕೊಂಡಿದೆ.

ಆ) ಹೌದು.

ಇ) ಈ ಯೋಜನೆಯಡಿಯಲ್ಲಿ ವೈದ್ಯಕೀಯ, ಬಿಡಿಎಸ್ ಮತ್ತು ಎಂಜಿನಿಯರಿಂಗ್ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಹಿಂದುಳಿದ ಹಾಗೂ ಅಲ್ಪಸಂಖ್ಯಾತರ ಅಭ್ಯರ್ಥಿಗಳಿಗೆ ವಾರ್ಷಿಕವಾಗಿ ರೂ.10,000ಗಳಂತೆ 5 ವರ್ಷಗಳವರೆಗೆ ರೂ. 50,000ಗಳ ಸಾಲವನ್ನು ವಾರ್ಷಿಕ 2 ರ ಬಡ್ಡಿ ದರದಲ್ಲಿ ನೀಡಲಾಗುತ್ತಿದೆ.

ಈ ಯೋಜನೆಯಡಿಯಲ್ಲಿ ಇವರುಗಳ ವಾರ್ಷಿಕ ಆದಾಯಮಿತಿ ರೂ. 22,000ಗಳವರೆಗೆ ಇರುವಂತಹ ಅಭ್ಯರ್ಥಿಗಳಿಗೆ ಸಿಇಟಿಯಲ್ಲಿ ಮೆರಿಟ್ ಆಧಾರದ ಮೇಲೆ ಉತ್ತೀರ್ಣರಾಗಿ, ಉಚಿತ ಸೀಟು ಪಡೆದವರಿಗೆ ಸಾಲ ಸೌಲಭ್ಯವನ್ನು ಒದಗಿಸಲಾಗುತ್ತಿದೆ. ಹಿಂದುಳಿದ ವರ್ಗಗಳ ಪ್ರವರ್ಗ-1 ಮತ್ತು 2ಎ ರಲ್ಲಿ ಬರುವ ಜಾತಿಗಳ ಹಾಗೂ ಅಲ್ಪಸಂಖ್ಯಾತರ ವರ್ಗದ ಜನರಿಗೆ ಈ ಸಾಲಸೌಲಭ್ಯವನ್ನು ಒದಗಿಸಲಾಗುತ್ತಿದೆ.

ಈ) ಮೇಲಿನ ಪ್ರಶ್ನೆಗಳಿಗೆ ನೀಡಿರುವ ಉತ್ತರಗಳ ಹಿನ್ನೆಲೆಯಲ್ಲಿ ಇದು ಉದ್ಭವಿಸುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ರೇಷ್ಮೆಯನ್ನು ಬೆಳೆಯುವುದು

4766 - ಶ್ರೀ ಮಹಾದೇವ ಪ್ರಸಾದ್ ಹೆಚ್.ಎಸ್. (ಗುಂಡ್ಲುಪೇಟೆ) : ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ರೇಷ್ಮೆ ಬೆಳೆಯುವ ಪ್ರದೇಶವೆಷ್ಟು? ಈ ಪ್ರದೇಶವನ್ನು ಹೆಚ್ಚಿಸಲು ಕೈಗೊಂಡಿರುವ ಕ್ರಮಗಳೇನು?

2) *ಗುಂಡ್ಲುಪೇಟೆ ತಾಲ್ಲೂಕು ಸೀಗೆವಾಡಿ ಗ್ರಾಮದ ಬಳಿ ರೇಷ್ಮೆ ಮಾರ್ಗದರ್ಶನ ಕೇಂದ್ರ ಪ್ರಾರಂಭಿಸಲಾಗಿದೆಯೇ?*

3) *ಯಾವ ವರ್ಷದಿಂದ ಈ ಕೇಂದ್ರ ಕೆಲಸ ಪ್ರಾರಂಭಿಸಿದೆ?*

4) *ಹಾಗಿದ್ದಲ್ಲಿ ಈವರೆಗೆ ಈ ಕೇಂದ್ರದಿಂದ ಕೈಗೊಂಡಿರುವ ಕಾರ್ಯಕ್ರಮಗಳೇನು?*

ಶ್ರೀ ಎಂ. ಮಹಾದೇವ್ (ರೇಷ್ಮೆ ಮತ್ತು ಜವಳಿ ಸಚಿವರು) :

1) ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಹಾಲಿ 1311 18 ಹೆಕ್ಟೇರ್ ಪ್ರದೇಶದಲ್ಲಿ ಹಿಪ್ಪುನೇರಳೆ ಬೆಳೆಯನ್ನು ಬೆಳೆಯಲಾಗುತ್ತಿದೆ. ಹಿಪ್ಪುನೇರಳೆ ಪ್ರದೇಶವನ್ನು ಹೆಚ್ಚಿಸಲು ಹಿಪ್ಪುನೇರಳೆ ಪ್ರಚಾರ ಆಂದೋಲನಾ ಕಾರ್ಯಕ್ರಮ ಹಮ್ಮಿಕೊಂಡು ಹಳ್ಳಿ ಹಳ್ಳಿಗಳಲ್ಲಿ ಹಿಪ್ಪುನೇರಳೆ ನಾಟಿ ಮಾಡುವ ಬಗ್ಗೆ ಕರಪತ್ರ ಹಾಗೂ ಕ್ಷೇತ್ರೋತ್ಸವ ಮಾಡಲಾಗಿದೆ. ಹೊಸದಾಗಿ ನಾಟಿಮಾಡುವ ಪರಿಶಿಷ್ಟ ಜಾತಿ/ ಪಂಗಡದ ರೇಷ್ಮೆ ಬೆಳಿಗಾರರಿಗೆ ರೂ. 2000-00ಗಳ ವೆಚ್ಚದಲ್ಲಿ ಬಿತ್ತನೆ ಕಡ್ಡಿ ಹಾಗೂ ಎರೆಹುಳ ಗೊಬ್ಬರವನ್ನು ಉಚಿತವಾಗಿ ನೀಡಲಾಗುತ್ತಿದೆ. ಪಶ್ಚಿಮ ಘಟ್ಟ ಅಭಿವೃದ್ಧಿ ಯೊಜನೆಯಡಿ ಹಿಪ್ಪುನೇರಳೆ ಸಸಿ ಬೆಳೆಸಿ ರಿಯಾಯಿತಿ ದರದಲ್ಲಿ ಮಾರಾಟ ಮಾಡಲಾಗುತ್ತಿದೆ.

2) ಹೌದು.

3) 1991 ರಿಂದ ಮಾರ್ಗದರ್ಶನ ಕೇಂದ್ರ ಪ್ರಾರಂಭಿಸಲಾಗಿದೆ.

4) 59.01 ಎಕರೆ ಜಮೀನಿಗೆ ಸೇರಿದ 5.00 ಎಕರೆ ಪ್ರದೇಶದಲ್ಲಿ ಎಂ5 0.20 ಎಕರೆಯಲ್ಲಿ ಎಸ್-13 ಹಾಗೂ 0.20 ಎಕರೆಯಲ್ಲಿ ವಿ1 ಹಿಪ್ಪುನೇರಳೆ ಕಡ್ಡಿ ಹಾಕಿಸಲಾಗಿದೆ. ಉಳಿದ ಜಮೀನಿನ ಪೈಕಿ 25 ಎಕರೆಯಷ್ಟು ಜಮೀನನ್ನು ಅರಣ್ಯ ಇಲಾಖೆಯವರ ಸಹಾಯದಿಂದ ವಿವಿಧ ಗಿಡಮರಗಳನ್ನು ಬೆಳೆಸಲಾಗಿದೆ. ಇದುವರೆಗೆ 2285.642 ಕೆ.ಜಿ. ಮಿಶ್ರತಳಿ, ಸಿನಿಜಿ ಹಾಗೂ ದ್ವಿತಳಿ ಗೂಡುಗಳನ್ನು ಉತ್ಪಾದಿಸಿ, ಇದರ ಬಾಬತ್ತು ರೂ. 2,19,304-00ಗಳನ್ನು ಸರ್ಕಾರಕ್ಕೆ ಜಮಾ ಮಾಡಲಾಗಿದೆ. ಎಂ5 ಹಿಪ್ಪುನೇರಳೆ ಬಿತ್ತನೆ ಕಡ್ಡಿ ಹಾಗೂ ಸಸಿಗಳ ಮಾರಾಟದಿಂದ ರೂ. 30427-00 ಸರ್ಕಾರಕ್ಕೆ ಜಮಾ ಮಾಡಲಾಗಿದೆ. ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆಯಡಿ 98-99 ರಲ್ಲಿ 1.00 ಲಕ್ಷ 99-2000 ರಲ್ಲಿ 1.00 ಲಕ್ಷ ಸಸಿ ಬೆಳೆಸಿ ರೈತರಿಗೆ ವಿತರಿಸಲಾಗಿದೆ. ಹಾಗೂ 2000-2001ನೇ ಸಾಲಿನಲ್ಲಿ 1.00 ಲಕ್ಷ ಸಸಿಗಳನ್ನು ಬೆಳಸಲು ಕಾರ್ಯಕ್ರಮ ಹಾಕಿಕೊಳ್ಳಲಾಗಿದೆ.2000-01ನೇ ಸಾಲಿನಲ್ಲಿ6100 ಸಿಎಸ್ಆರ್ ತಳಿ ಮೊಟ್ಟೆಗಳನ್ನು 2ನೇ ಹಂತದವರೆಗೆ ಚಾಕಿ ಮಾಡಿ ರೈತರಿಗೆ ವಿತರಿಸಲಾಗಿದೆ.

ಕೊಳ್ಳೇಗಾಲ ಜನರಿಗೆ ಕುಡಿಯುವ ನೀರು ಒದಗಿಸುವ ಬಗ್ಗೆ

4767 - ಶ್ರೀ ನಂಜುಂಡಸ್ವಾಮಿ ಜಿ.ಎಸ್. (ಕೊಳ್ಳೇಗಾಲ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕೊಳ್ಳೇಗಾಲದ ಜನತೆಗೆ ನೀರನ್ನು ಒದಗಿಸಲು ಕಾವೇರಿ 2ನೇ ಹಂತದ ಯೋಜನೆ ಮಂಜೂರಾಗಿದ್ದರೂ ಇದುವರೆವಿಗೆ ಕೆಲಸವನ್ನು ಪ್ರಾರಂಭಿಸದೇ ಇರಲು ಕಾರಣವೇನು?*